## ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಖಾಸಗಿ ಅನುದಾನಿತ ಪದವಿ, ಶಿಕ್ಷಣ ಹಾಗೂ ಕಾನೂನು ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ ಗ್ರಂಥಪಾಲಕರಿಗೆ ವೃತ್ತಿ ಪದೋನ್ನತಿಯಡಿಯಲ್ಲಿ 2018ರ ಯುಜಿಸಿ ನಿಯಮಗಳನ್ವಯ ಶೈಕ್ಷಣಿಕ ಹಂತ 11 ರಿಂದ 12ರ ವೃತ್ತಿ ಪದೋನ್ನತಿ ಮಂಜೂರು ಮಾಡುವ ಬಗ್ಗೆ

ಉಲ್ಲೇಖ:
1) ಯು.ಜಿ.ಸಿ. ನಿಯಮಗಳ ಆದೇಶ ಸಂಖ್ಯೆ:ಎಫ್1-2/2017 (ಇಸಿ/ಪಿಎಸ್), ದಿ:18.07.2018.
2) ಸರ್ಕಾರಿ ಆದೇಶ ಸಂಖ್ಯೆ: ಇಡಿ/483/ಯುಎನ್‌ಇ/2017 ದಿನಾಂಕ:16.03.2019.
3) ಸರ್ಕಾರಿ ಆದೇಶ ಸಂಖ್ಯೆ: ಇಡಿ 123 ಡಿಸಿಇ 2020, ದಿ:02.03.2021
4) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/177/ಎಜಿಪಿ/2018-19/ಬಸ್ಥಾವಿ, ದಿನಾಂಕ:23.02.2022.
5) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ/62/ಖಾಅಬ/2021-22/ಬಸ್ಥಾವಿ, ದಿನಾಂಕ:17.03.2022.
6) ಸರ್ಕಾರದ ಪತ್ರ ಸಂಖ್ಯೆ:ಲಾ-ಕೆಎಲ್-ಎಂ/26/2022, ದಿನಾಂಕ:25.07.2022.
7) ಪ್ರಾದೇಶಿಕ ಕಛೇರಿ ಜಂಟಿ ನಿರ್ದೇಶಕರ ಮೂಲಕ ಸ್ವೀಕೃತವಾಗಿರುವ ಪ್ರಾಂಶುಪಾಲರ ಹಂತದ ಪರಿಶೀಲನಾ ಸಮಿತಿಯ ವರದಿಗಳು.
8) ಸರ್ಕಾರದ ಪತ್ರ ಸಂಖ್ಯೆ: ಇಡಿ 147 ಡಿಸಿಇ 2022(ಇ), ದಿನಾಂಕ:03.11.2022.

* * * *

**ಪ್ರಸ್ತಾವನೆ :**

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ಎಲ್ಲಾ ಖಾಸಗಿ ಅನುದಾನಿತ ಪದವಿ, ಶಿಕ್ಷಣ ಹಾಗೂ ಕಾನೂನು ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರಿಗೆ 2016ರ ಯು.ಜಿ.ಸಿ. ವೇತನ ಶ್ರೇಣಿಯನ್ನು ಉಲ್ಲೇಖ(2)ರ ಆದೇಶದಲ್ಲಿ ಜಾರಿಗೊಳಸಲಾಗಿರುತ್ತದೆ. ಈ ಆದೇಶದಲ್ಲಿ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳು ಶೈಕ್ಷಣಿಕ ಹಂತ 11 ರಿಂದ 12ನ್ನು ಸಿ.ಎ.ಎಸ್ ವೃತ್ತಿ ಪದೋನ್ನತಿ ಅಡಿಯಲ್ಲಿ ಪದೋನ್ನತಿ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ.

ಉಲ್ಲೇಖ(6)ರ ಸರ್ಕಾರದ ಪತ್ರದಲ್ಲಿ ಅನುದಾನಿತ ಕಾನೂನು ಕಾಲೇಜುಗಳ ಬೋಧಕ ಸಿಬ್ಬಂದಿಗಳಗೆ ವೃತ್ತಿ ಪದೋನ್ನತಿ ಸೌಲಭ್ಯವನ್ನು (CAS) ಮಂಜೂರು ಮಾಡುವುದನ್ನು ಚಾಲ್ತಿಯಲ್ಲಿರುವ ಯುಜಿಸಿ ನಿಯಮಾವಳಿಗಳು ಮತ್ತು ದಿನಾಂಕ:10.12.2019ರ ಸರ್ಕಾರಿ ಆದೇಶ ಸಂಖ್ಯೆ:ಲಾ-ಕೆಎಲ್-ಎಂ/56/2019ರ ಆದೇಶದ ಕಂಡಿಕೆ-17ರಲ್ಲಿನ ಅವಕಾಶಗಳ ಪ್ರಕಾರ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲು ತಿಳಸಲಾಗಿರುತ್ತದೆ.

2018ರ ಯು.ಜಿ.ಸಿ. ಮಾರ್ಗಸೂಚಿಗಳನ್ವಯ ನಿಯಮಾವಳಿಗಳಲ್ಲಿನ ಷರತ್ತುಗಳಿಗೊಳಪಟ್ಟು ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ (Career Advancement Scheme) ಉನ್ನತ ಶೈಕ್ಷಣಿಕ ಹಂತಗಳಲ್ಲಿ ಪದೋನ್ನತಿ ಮಂಜೂರು ಮಾಡಲು ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

..2

ಉಲ್ಲೇಖ (1) ರಿಂದ (3)ರ ಯುಜಿಸಿ ಹಾಗೂ ಸರ್ಕಾರದ ಆದೇಶ ಮತ್ತು ಮಾರ್ಗಸೂಚಿಗಳ ಅನುಸಾರ ಶೈಕ್ಷಣಿಕ ಹಂತ 11 ರಿಂದ 12ಕ್ಕೆ ವೃತ್ತಿ ಪದೋನ್ನತಿ ಮಂಜೂರು ಮಾಡುವ ಸಂಬಂಧ ಪ್ರಾಂಶುಪಾಲರು ಉಲ್ಲೇಖ(4)ರ ಸುತ್ತೋಲೆಯಲ್ಲಿ ತಿಳಿಸಿರುವ ಪ್ರಕಾರ ಆಯ್ಕೆ ಸಮಿತಿಯನ್ನು ರಚಿಸಿ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರಿಗೆ ಸಂಬಂಧಿಸಿದಂತೆ, ಯು.ಜಿ.ಸಿ.ಯ ದಿ:18/07/2018ರ ಅಧಿಸೂಚನೆಯಲ್ಲಿ ನೀಡಲಾಗಿರುವ The entry-level Assistant Professors (Level 10) shall be eligible for promotion under the Career Advancement Scheme (CAS) through two successive levels (Level 11 and Level 12), provided they are assessed to fulfil the eligibility and performance criteria as laid down in Clause **6.3** of these UGC Regulations-2018 ರಂತೆ Appendix II Table I ಕೂಲಂಕಷವಾಗಿ ಪರಿಶೀಲಿಸಿ, ಗ್ರೇಡಿಂಗ್ ಆಧಾರಿಸಿ ಉನ್ನತ ಎ.ಜಿ.ಪಿ.ಗೆ ಅರ್ಹತೆ ಹೊಂದಿರುವವರ ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ಹಾಗೂ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನೊಂದಿಗೆ ಸಂಬಂಧಿಸಿದ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರ ಮೂಲಕ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅದರನ್ವಯ ಪ್ರಾಂಶುಪಾಲರ ಹಂತದ ಸಮಿತಿಯು ಅರ್ಹ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಉನ್ನತ ಶೈಕ್ಷಣಿಕ ಹಂತಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ. ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸು, ಇಲಾಖಾ ಸಿ.ಎ.ಎಸ್ ಸಮಿತಿಯ ತೀರ್ಮಾನದನ್ವಯ ಹಾಗೂ ಉಲ್ಲೇಖ(7)ರ ಅಂಶಗಳ ಹಿನ್ನೆಲೆಯಲ್ಲಿ ಉನ್ನತ ಶೈಕ್ಷಣಿಕ ಹಂತ ಮಂಜೂರು ಮಾಡಲು ಈ ಆದೇಶ.

**ಆದೇಶ ಸಂಖ್ಯೆ: DCE/PP/PLA/68/2023-PP, ದಿನಾಂಕ : 13-09-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಉಲ್ಲೇಖ(3)ರ ಸರ್ಕಾರದ ದಿನಾಂಕ:02.03.2021ರ ಆದೇಶದ ಅನುಮೋದನೆಗಳ ಪ್ರಕಾರ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಹಾಗೂ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಶಿಫಾರಸ್ಸಿನಂತೆ, ಖಾಸಗಿ ಅನುದಾನಿತ ಪದವಿ, ಶಿಕ್ಷಣ ಹಾಗೂ ಕಾನೂನು ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ ಗ್ರಂಥಪಾಲಕರಿಗೆ ಉಲ್ಲೇಖ(8)ರ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ಆದೇಶವಾದ ದಿನಾಂಕದಿಂದ ಅನ್ವಯವಾಗುವಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಬಂಧದಲ್ಲಿ ನಮೂದಾಗಿರುವ ಬೋಧಕರುಗಳಿಗೆ 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಶೈಕ್ಷಣಿಕ ಹಂತ 11 ರಿಂದ 12ಕ್ಕೆ ವೃತ್ತಿ ಪದೋನ್ನತಿಯನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.

**ಷರತ್ತುಗಳು :**

1. 2018ರ ಯುಜಿಸಿ ನಿಯಮಾವಳಿಗಳ ಗ್ರೇಡಿಂಗ್ ಆಧಾರಿತ ಶೈಕ್ಷಣಿಕ ಹಂತದ ಮಂಜೂರಾತಿ ಉಲ್ಲೇಖ(1) ರಿಂದ (3)ರ ಯುಜಿಸಿ/ಸರ್ಕಾರದ ಆದೇಶಗಳಲ್ಲಿನ ನಿಯಮಗಳ ನಿಬಂಧನೆಗಳೊಪಟ್ಟಿರುತ್ತದೆ.
2. ಯು.ಜಿ.ಸಿ.ಯ ದಿ. 18/07/2018ರ ಅಧಿಸೂಚನೆಯಲ್ಲಿ ನೀಡಲಾಗಿರುವ Clause 6.4 A The entry-level Assistant Professors (Level 10) shall be eligible for promotion under the Career Advancement Scheme (CAS) through two successive levels (Level 11 and Level 12), provided they are assessed to fulfil the eligibility and performance criteria as laid down in Clause 6.3 of these UGC Regulations-2018 ರಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳನ್ನು ಪೂರೈಸಿರುವ ಬಗ್ಗೆ ಆಯ್ಕೆ ಸಮಿತಿಯು ಪರಿಶೀಲಿಸಿ ಶಿಫಾರಸ್ಸು ಮಾಡಿರುವ ಮೇರೆಗೆ

ಮಂಜೂರಾತಿಗೆ ಅನುಮೋದನೆ ನೀಡಲಾಗಿದ್ದು, ಸಂಪೂರ್ಣ ಜವಾಬ್ದಾರಿ ಪ್ರಾಂಶುಪಾಲರ ಹಂತದ ಸಮಿತಿಯದ್ದಾಗಿರುತ್ತದೆ. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹ ಪ್ರಾಧ್ಯಾಪಕರ ಶೈಕ್ಷಣಿಕ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯನ್ನು ನೀಡದೇ ಹಿಂಪಡೆಯಲಾಗುವುದು. ಮತ್ತು ತಪ್ಪು ಮಾಹಿತಿ ಒದಗಿಸಿದ ಸಹಾಯಕ ಪ್ರಾಧ್ಯಾಪಕರು/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರ ಹಾಗೂ ಶಿಫಾರಸ್ಸು ಮಾಡಿದ ಪ್ರಾಂಶುಪಾಲರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

3. ಸಹಾಯಕ ಪ್ರಾಧ್ಯಾಪಕರ ಖಾಯಂ ನೇಮಕಾತಿ ದಿನಾಂಕ, ಯು.ಜಿ.ಸಿ. ವೇತನ ನಿಗಧೀಕರಣದ ದಿನಾಂಕ, ವೇತನ ರಹಿತ ರಜೆ/ಅನಧಿಕೃತ ಗೈರು ಹಾಜರಿ, ಶಿಸ್ತು ಕ್ರಮದ ಮಾಹಿತಿ, ಸಂಶೋಧನಾ ಲೇಖನ ಹಾಗೂ ರೆಫ್ರೆಷರ್ ಕೋರ್ಸ್‌ಗಳನ್ನು ನಿಗದಿತ ಎರಡು ವಾರದ ತರಬೇತಿ ಪೂರೈಸಿರುವುದು, ಇನ್ನಿತರೆ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ಹಂತದ ಸಮಿತಿಯು ಮತ್ತೊಮ್ಮೆ ಪರಿಶೀಲಿಸುವ ನಿಬಂಧನೆಗೊಳಪಟ್ಟಿರುತ್ತದೆ.

4. ಈ ವೃತ್ತಿ ಪದೋನ್ನತಿ ಮಂಜೂರಾತಿಯು ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

5. ಸಹಾಯಕ ಪ್ರಾಧ್ಯಾಪಕರ ವೃತ್ತಿ ಪದೋನ್ನತಿಯನ್ನು ಸೇವಾ ಜ್ಯೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

6. ಈ ಆದೇಶದನ್ವಯ ಮಂಜೂರು ಮಾಡಲಾದ ಶೈಕ್ಷಣಿಕ ಹಂತಗಳ ವೃತ್ತಿ ಪದೋನ್ನತಿಯು ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಯಾವುದೇ ಅಸಂಗತೆ ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

7. ವೃತ್ತಿ ಪದೋನ್ನತಿ ಮಂಜೂರಾತಿ ಆದೇಶದ ಮೇರೆಗೆ ಪ್ರಾಂಶುಪಾಲರು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ~~ಸಹ~~ ಸಹಾಯಕ ಪ್ರಾಧ್ಯಾಪಕರ ವೇತನ ನಿಗದೀಕರಣದ ಬಗ್ಗೆ ಅಗತ್ಯ ಕ್ರಮಕೈಗೊಳ್ಳತಕ್ಕದ್ದು.

8. ಸಹಾಯಕ ಪ್ರಾಧ್ಯಾಪಕರು ವಿವಿಧ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಪಿಹೆಚ್‌ಡಿ ಪದವಿಯ ನೈಜತೆಯ ಆಧಾರದ ಮೇಲೆ ಆದೇಶ ಹೊರಡಿಸಲಾಗಿದ್ದು, ಈ ಬಗ್ಗೆ ಮುಂದೆ ಅಸಂಗತೆ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಆದೇಶವನ್ನು ರದ್ದುಪಡಿಸುವ ಷರತ್ತಿಗೊಳಪಟ್ಟಿರುತ್ತದೆ.

9. ಉಲ್ಲೇಖ(8)ರ ಸರ್ಕಾರದ ಪತ್ರದನ್ವಯ **ಶೈಕ್ಷಣಿಕ ಹಂತ 11 ಮತ್ತು 12ನ್ನು ದಿನಾಂಕ:** 13.09.2023 ಕ್ಕೆ ಅನ್ವಯವಾಗುವಂತೆ ಮಂಜೂರು ಮಾಡಲಾಗಿರುತ್ತದೆ.

**ಅನುಬಂಧ**

(ರೂ.7000/- ದಿಂದ ರೂ.8000/- ಎಜಿಪಿ)

| ಕ್ರ. ಸಂ | ಹೆಸರು, ವಿಷಯ ಮತ್ತು ಕಾರ್ಯ ನಿರ್ವಹಿಸುತ್ತಿರುವ ಕಾಲೇಜು ಶ್ರೀ/ಶ್ರೀಮತಿ | ಖಾಯಂ ನೇಮಕಾತಿ/ ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿದ ದಿನಾಂಕ | ರೂ.7000/- ಎಜಿಪಿ ಮಂಜೂರಾದ ದಿನಾಂಕ | ರೂ.8000/- ಎಜಿಪಿ ಅರ್ಹತೆ ದಿನಾಂಕ |
|---|---|---|---|---|
| 1 | 2 | 3 | 4 | 5 |
| 1 | ವಿಕ್ರಂ.ಸಿ.ಬಿ,<br>ಶಿಕ್ಷಣ ಶಾಸ್ತ್ರ,<br>ಜೆ.ಎಸ್.ಎಸ್.ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ | 18.02.2011 | 22.09.2016 | 16.03.2023 |
| 2 | ನರಸಿಂಹನ್.ಜಿ.ವಿ,<br>ವಾಣಿಜ್ಯಶಾಸ್ತ್ರ,<br>ಪಿ.ಇ.ಎಸ್ ಕಾಲೇಜು, ಮಂಡ್ಯ | 02.01.2013 | 03.01.2017 | 03.01.2022 |

ಆದೇಶ ಸಂಖ್ಯೆ:DCE/PP/PLA/68/2023-PP, ದಿನಾಂಕ : 13-09-2023

| ಕ್ರ. ಸಂ | ಹೆಸರು, ವಿಷಯ ಮತ್ತು ಕಾರ್ಯ ನಿರ್ವಹಿಸುತ್ತಿರುವ ಕಾಲೇಜು ಶ್ರೀ/ಶ್ರೀಮತಿ | ಖಾಯಂ ನೇಮಕಾತಿ/ ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿದ ದಿನಾಂಕ | ರೂ.7000/- ಎಜಿಪಿ ಮಂಜೂರಾದ ದಿನಾಂಕ | ರೂ.8000/- ಎಜಿಪಿ ಅರ್ಹತೆ ದಿನಾಂಕ |
|---|---|---|---|---|
| 1 | 2 | 3 | 4 | 5 |
| 3 | ರೂಪ.ಡಿ.ಆರ್, ದೈಹಿಕ ಶಿಕ್ಷಣ, ಬಿ.ಎಂ.ಎಸ್ ಮಹಿಳಾ ಕಾಲೇಜು, ಬೆಂಗಳೂರು | 09.06.2009 | 09.06.2015 | 08.12.2020 |
| 4 | ಡಾ.ರಘುಕುಮಾರ್.ಎನ್, ಸಮಾಜಶಾಸ್ತ್ರ, ಬಿ.ಎಂ.ಎಸ್ ಮಹಿಳಾ ಕಾಲೇಜು, ಬೆಂಗಳೂರು | 02.07.2010 | 02.07.2016 | 02.07.2021 |
| 5 | ನೀತು.ಜಿ.ಎಸ್, ಗ್ರಂಥಪಾಲಕರು ಬಿ.ಎಂ.ಎಸ್ ಮಹಿಳಾ ಕಾಲೇಜು, ಬೆಂಗಳೂರು | 21.12.2009 | 21.12.2015 | 21.12.2020 |
| 6 | ವೆಂಕಟರೆಡ್ಡಿ.ಬಿ, ಗ್ರಂಥಪಾಲಕರು ಮಹಾತ್ಮ ಜ್ಯೋತಿ ಬಾಪುಲೆ ಕಲಾ ಕಾಲೇಜು, ಕಲಬುರಗಿ | 29.05.2009 | 18.06.2017 | 18.06.2022 |
| 7 | ಮಧುಸೂದನ ರೆಡ್ಡಿ, ದೈಹಿಕ ಶಿಕ್ಷಣ, ಮಹಾತ್ಮ ಜ್ಯೋತಿ ಬಾಪುಲೆ ಕಲಾ ಕಾಲೇಜು, ಕಲಬುರಗಿ | 29.05.2009 | 18.06.2017 | 31.08.2022 |

(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

13/9/23
ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

ಇವರಿಗೆ:

ಜಂಟಿ ನಿರ್ದೇಶಕರು ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು ಮತ್ತು ಕಲಬುರಗಿ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಈ ಎ.ಜಿ.ಪಿಯ ಬಗ್ಗೆ ಸದರಿ ಆದೇಶದಂತೆ ಸಂಬಂಧಪಟ್ಟ ಪ್ರಾಂಶುಪಾಲರುಗಳಿಂದ ವೇತನ ನಿಗದಿಕರಣ ಪ್ರಸ್ತಾವನೆ ಪಡೆದು ತಮ್ಮ ಹಂತದಲ್ಲಿಯೇ ವೇತನ ನಿಗದಿಪಡಿಸಲು ತಿಳಿಸಲಾಗಿದೆ. ವೇತನ ನಿಗದೀಕರಣದಲ್ಲಿ ಉಂಟಾಗುವ ಯು.ಜಿ.ಸಿ ವೇತನ ಬಾಕಿಯನ್ನು ಒಟ್ಟಾಗಿ ಲೆಕ್ಕ ಹಾಕಿ ವಿಶೇಷ ಆಯವ್ಯಯ ಮಂಜೂರಾತಿಗಾಗಿ ಈ ಕಛೇರಿಯ ಆಯವ್ಯಯ ವಿಭಾಗಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಹಾಗೂ ವಿಶೇಷ ಆಯವ್ಯಯ ಮಂಜೂರಾತಿ ಬಂದ ನಂತರವೇ ಬಾಕಿ ವೇತನವನ್ನು ಬಿಡುಗಡೆ ಮಾಡಲು ಸೂಚಿಸಲಾಗಿದೆ.

ಪ್ರತಿಯನ್ನು:

1) ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
2) ಕಛೇರಿ ಪ್ರತಿ.